ಮಸೀದಿಗಳು ಮತ್ತು ಖಬರಸ್ತಾನಗಳ ಅಭಿವೃದ್ಧಿ

61 : (142)

ಶ್ರೀ ಖಾದರ್ ಯು.ಟಿ.

ಅ) ಕಳೆದ 3 1/2 ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಸೀದಿಗಳು ಮತ್ತು ಅಲ್ಪಸಂಖ್ಯಾತರ ಖಬರಸ್ಥಾನಗಳ ಅಭಿವೃದ್ಧಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನವೆಷ್ಟು;

ಆ) ಸರ್ಕಾರ ಬಿಡುಗಡೆ ಮಾಡಿದ ಅನುದಾನ ಸಂಪೂರ್ಣ ವೆಚ್ಚವಾಗಿದೆಯೇ;

ಇ) ಬಾಕಿ ಇರುವ ಅನುದಾನವನ್ನು ವೆಚ್ಚ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಮಂಗಳೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಉಳಿಕೆ ಹಣ ಉಪಯೋಗಿಸಿಕೊಳ್ಳಲು ಸರ್ಕಾರ ಅನುಮತಿ ನೀಡುವುದೇ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ವಕ್ಫ್ ಸಂಸ್ಥೆಗಳ ನಿರ್ಮಾಣ, ದುರಸ್ಥಿ ಹಾಗೂ ಜೀರ್ಣೋದ್ಧಾರಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಕಳೆದ 3 1/2 ವರ್ಷಗಳಿಂದ ರು. 132.66 ಲಕ್ಷಗಳ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡಿದೆ.

ಆ) ಸರ್ಕಾರ ಬಿಡುಗಡೆ ಮಾಡಿದ ಅನುದಾನದಲ್ಲಿ ರೂ. 129.66 ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ.

ಇ) ಮೊದಲನೇ ಕಂತಿನ ಅನುದಾನವನ್ನು ಉಪಯೋಗಿಸಿರುವ ಬಗ್ಗೆ ಬಳಕೆ ಪ್ರಮಾಣ ಪತ್ರ ಬಂದ ನಂತರ ಬಾಕಿ ಇರುವ ಅನುದಾನವನ್ನು ವೆಚ್ಚ ಮಾಡಲಾಗುವುದು.

ಈ) ಉಳಿದ ಮೊತ್ತ ಈಗಾಗಲೇ ಮೊದಲನೆಯ ಕಂತು ಬಿಡುಗಡೆ ಮಾಡಲಾಗಿದ್ದು, ಅದರ ಉಪಯೋಗ ಪ್ರಮಾಣ ಪತ್ರ ಬಂದ ನಂತರ ಅದೇ ಸಂಸ್ಥೆಗೆ ಬಿಡುಗಡೆ ಮಾಡಬೇಕಾಗಿರುವುದರಿಂದ ಬೇರೆ ಕ್ಷೇತ್ರಕ್ಕೆ ಮಂಜೂರು ಮಾಡಲು ಅವಕಾಶ ಇರುವುದಿಲ್ಲ.

ಅಸಂಕಇ 55 ಡಬ್ಲ್ಯೂಇಎಸ್ 2012